ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.3134/2023

| | | | |
|---|---|---|---|
| ಹೆಸರು | : | ಮಧುಸೂದನ ಕೆ | ಸಿ .ಡಬ್ಲ್ಯೂ :2 |
| ತಂದೆ ಹೆಸರು | : | ಕೇಶವಮೂರ್ತಿ | ಪಿ .ಡಬ್ಲ್ಯೂ :2 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಪೊಲೀಸ್ ಪೇದೆ , ಗುಬ್ಬಿ ವೃತ್ತ ನಿರೀಕ್ಷಕರರ ಕಚೇರಿ , ಗುಬ್ಬಿ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ01-09-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 23-10-2017 ರಿಂದ 17-07-2023 ರವರೆಗೆ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತ್ಯ ವ್ಯ ನಿರ್ವಹಿಸಿದ್ದೇನೆ .

ದಿಃ 25-04-2023 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ಚಾಸಾ -1 ರವರೊಡನೆ ನಾನು ಮತ್ತು ಚಾಸಾ -5 ರಿಂದ 7 ರವರು ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ -1 ರವರಿಗೆ ಗುಬ್ಬಿ ರೈಲ್ವೆ ಸ್ಟೇಷನ್ ರಸ್ತೆಯಲ್ಲಿನ ಜ್ಯೋತಿ ನಗರದಲ್ಲಿರುವ ಆರೋಪಿತರ ಅಂಗಡಿಗೆ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬುದಾಗಿ ಬಂದ ಮಾಹಿತಿಯ ಆಧಾರದಲ್ಲಿ ಚಾಸಾ -1 ರವರು ನಮ್ಮ ಜೊತೆ ಸದರಿ ಸ್ಥಳಕ್ಕೆ ದಾಳಿ ನಡೆಸಿದರು . ಅರೋಪಿತರ ಅಂಗಡಿಯನ್ನು ಬೆಳಗ್ಗೆ 8.30 ರ ಸಮಯದಲ್ಲಿ ಪರಿಶೀಲಿಸಲಾಗಿ ಅಂಗಡಿಯಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ವಿವಿಧ ಕಂಪನಿಯ 10 ಲೀಟರ್ ಗಿಂತ ಹೆಚ್ಚಿನ ಮದ್ಯ ದೊರೆತಿದ್ದು ಚಾಸಾ -1 ರವರು ಆರೋಪಿತರನ್ನು ವಶಕ್ಕೆ ಪಡೆದು ವಿಚಾರಿಸಲಾಗಿ ಅವರು ತನ್ನ ಹೆಸರು ಈರಣ್ಣ ಬಿನ್ ಲೇಟ್ ಕಾಳಯ್ಯ 51 ವರ್ಷ , ಜ್ಯೋತಿ ನಗರ , ರೈಲ್ವೆ ಸ್ಟೇಷನ್ ರಸ್ತೆ , ಗುಬ್ಬಿ ಎಂದು ತಿಳಿಸಿದರು . ಚಾಸಾ -1 ರವರು ಅವರ ಬಳಿ ಮದ್ಯ ಮಾರಾಟ ಮಾಡಲು ಮತ್ತು ಸಂಗ್ರಹಿಸಲು ಪರವಾನಗಿ ಇದೆಯೇ ಎಂದು ಪ್ರಶ್ನಿಸಿದ್ದರು . ಆರೋಪಿತರು ಯಾವುದೇ ಪರವಾನಗಿ ಇಲ್ಲವೆಂದು ತಿಳಿಸಿದ್ದಾರೆ . ಚಾಸಾ -1 ರವರು ಸ್ಥಳದಲ್ಲಿ ಆ ಸಂಬಂಧ ವರದಿ ತಯಾರಿಸಿ ನನಗೆ ನೀಡಿದ್ದು ಅದನ್ನು ಠಾಣಾ SHO ಅವರಿಗೆ ನೀಡಿ ಪ್ರಕರಣ ದಾಖಲಿಸಲು ತಿಳಿಸಿದ್ದರು , ಆ ಪ್ರಕಾರ ನಾನು ಬೆಳಗ್ಗೆ 9.00 ಗಂಟೆಗೆ ಠಾಣೆಗೆ ಬಂದು ಠಾಣಾ SHO ಅವರಿಗೆ ವರದಿಯನ್ನು ನೀಡಿದ್ದೇನೆ . ಅವರು ಅಬಕಾರಿ ಕಾಯ್ದೆ 32 ಮತ್ತು 34 ರಡಿಯಲ್ಲಿ CR No. 121/2023 ರಂತೆ ಪ್ರಕರಣವನ್ನು ದಾಖಲಿಸಿದ್ದಾರೆ .

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ . ಪ್ರಕರಣವನ್ನು ಕುರಿತು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿದ್ದೇನೆ . ಆದಿನ ಆರೋಪಿತರ ಅಂಗಡಿಯಲ್ಲಿ ವಶಪಡಿಸಿಕೊಳ್ಳಲಾದ ಮದ್ಯವನ್ನು ನೋಡಿದರೆ ಗುರುತಿಸುತ್ತೇನೆ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ನನಗೆ ಗುಬ್ಬಿ ತಾಲ್ಲೂಕಿನ ಬಗ್ಗೆ ಸಾಕಷ್ಟು ಮಾಹಿತಿ ಇದೆ ಎಂದರೆ ಸರಿ . ಗುಬ್ಬಿ ತಾಲ್ಲೂಕಿನಲ್ಲಿ 23-24 ಬಡಾವಣೆಗಳು ಇವೆ ಎಂದರೆ ಸರಿ . ಮೇಲೆ ಹೇಳಿದ ದಿನಾಂಕದಂದು ಚಾಸಾ -1 ಹಾಗೂ ನಮ್ಮ ಇತರೆ ಸಿಬ್ಬಂದಿಗಳೊಡನೆ ಗುಬ್ಬಿ ಗಟ್ಟಿ ಲೇಔಟ್ ಮತ್ತು ಕೆ ಹೆಚ್ ಪಿ ಕಾಲೋನಿಯಲ್ಲಿ ಗಸ್ತು ಮಾಡುತ್ತಿದ್ದೆವು . ಆ ದಿನ ಗಸ್ತು ಕರ್ತವ್ಯಕ್ಕೆ ಹೋಗಿದ್ದ ಇಲಾಖ ಜೀಪ್ ನ ನೋಂದಣಿ ಸಂಖ್ಯೆ ಗೊತ್ತಿಲ್ಲ . ಆ ದಿನ ಜೀಪ್ ನ್ನು ಚಾಸಾ -5 ರವರು ಚಲಾಯಿಸುತ್ತಿದ್ದರು . ನಮ್ಮ ಇಲಾಖೆಯ ಜೀಪ್ ಚಾಲನೆ ಮಾಡಲು ಜಿಲ್ಲಾ ಸಶಸ್ತ್ರ ಪೊಲೀಸ್ ಮೀಸಲು ಪಡೆಯಿಂದ ಸಿಬ್ಬಂದಿಯೊಬ್ಬರನ್ನು ನೇಮಿಸಿರುತ್ತಾರೆ ಎಂದರೆ ಸರಿ , ಆ ಸಮಯ ನೇಮಿಸಿರಲಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ಮೇಲೆ ಹೇಳಿದ ದಿನಾಂಕದಂದು ಚಾಸಾ-1 ರವರು ಯಾವ ಕಂಪನಿಯ ಎಷ್ಟು ಅಳತೆಯ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನಿರ್ದಿಷ್ಟವಾಗಿ ಗೊತ್ತಿಲ್ಲ , ಒಟ್ಟು 10 ಲೀಟರ್ ಗಿಂತ ಹೆಚ್ಚು ಎಂದು ಉತ್ತರಿಸಿದ್ದಾರೆ .

ಮೇಲೆ ತಿಳಿಸಿದ ದಿನಾಂಕದಂದು ನಾನು ಚಾಸಾ -1 ರವರೊಡನೆ ಯಾವುದೇ ಗಸ್ತು ಕರ್ತವ್ಯಕ್ಕೆ ಹೋಗಿಲ್ಲ , ನಾನು ಹೇಳವಂತಹ ಸ್ಥಳಗಳಲ್ಲಿ ಯಾವುದೇ ಗಸ್ತು ಕರ್ತವ್ಯ ಇರಲಿಲ್ಲ ಎಂದರೆ ಸರಿಯಲ್ಲ . ನಾನು ಹೇಳುವಂತೆ ನಾನು ಮತ್ತು ನನ್ನ ಮೇಲಾಧಿಕಾರಿಗಳು ಮತ್ತು ಸಿಬ್ಬಂದಿಗಳು ಯಾವುದೇ ದಾಳಿ ನಡೆಸಿಲ್ಲ , ಆರೋಪಿತರಿಂದ ಯಾವುದೇ ಅಕ್ರಮ ಮದ್ಯ ವಶಪಡಿಸಿಕೊಂಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಆಟೋ ಚಾಲಕರು ಎಂದರೆ ಸರಿ . ಜ್ಯೋತಿ ನಗರದಲ್ಲಿ ಆರೋಪಿತರಿಗೆ ಸೇರಿದ ಯಾವುದೇ ಅಂಗಡಿ ಮಳಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಜೀವನೋಪಾಯಕ್ಕಾಗಿ ರಾತ್ರಿ 10.00 ಗಂಟೆಯ ನಂತರವೂ ಸಹಾ ಆಟೋ ಚಾಲನೆ ಮಾಡುತ್ತಿದ್ದುದರಿಂದ ಹಾಗೆ ಮಾಡಬಾರದೆಂದು ನಮ್ಮ ಇಲಾಖೆಯಿಂದ ಹಲವು ಬಾರಿ ತಿಳಿಸಿದ್ದೆವು , ಅವರು ಕೇಳಲಿಲ್ಲ ಎಂಬ ಕಾರಣಕ್ಕೆ ಅವರ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನಾನು ಯಾವುದೇ ವರದಿಯನ್ನು ಆ ದಿನ ಠಾಣಾ SHO ರವರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

ಚಾಸಾ -1 ರವರು ನನ್ನ ಮೇಲಾಧಿಕಾರಿಯಾಗಿರುವ ಕಾರಣ ಅವರು ದಾಖಲಿಸಿರುವ ಪ್ರಕರಣಕ್ಕೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕಾಗಿ ಮದ್ಯದ ಬಾಟಲ್‌ಗಳನ್ನು ಮತ್ತು ಪೌಚ್ ಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.